ವ್ಯಕ್ತಿ ಅಲ್ಲಿಯೇ ನಿಂತಿದ್ದ. ಅವನ ಬಾಯಲ್ಲಿ ಸಿಗರೇಟ್ ಹಾಗೆಯೇ ಉರಿಯುತ್ತಿತ್ತು.

"ಒಂದು ಸಿಗರೇಟ್ ಇದೆಯಾ... ಪ್ಲೀಸ್..." ಎಂದು ಆ ಮುದುಕ ರವಿಯ ಕಡೆ ಕೈ ಚಾಚಿದ. ಕೆಳಗಿರುವವನ ಸಿಗರೇಟ್ ನೋಡಿ ಈ ಮುದುಕನಿಗೂ ಆಸೆ ಆಗಿದೆ ಅಂತ ಕಾಣುತ್ತದೆ ಎಂದುಕೊಂಡು ಜೇಬಿನಲ್ಲಿದ್ದ ಸಿಗರೇಟ್ ಪ್ಯಾಕ್ ಹೊರತೆಗೆದ. "ಸಿಗರೇಟ್ ಪ್ಲೀಸ್... ಸಿಗರೇಟ್ ಪ್ಲೀಸ್..." ಹಿಂದಗಡೆಯಿಂದ ಸದ್ದು ಕೇಳಿಸಿತು. ತಿರುಗಿ ನೋಡಿದ ರವಿ. ಹೆಂಗಸರು, ಮಕ್ಕಳು ಭೇದವಿಲ್ಲದೇ ಎಲ್ಲರೂ ಎದ್ದು ಕೇಳತೊಡಗಿದರು... ಆ ವಧುವಿನ ಅಲಂಕಾರದ ಹುಡುಗಿ ಕೂಡಾ ಎದ್ದು ನಿಂತು ಕೇಳತೊಡಗಿದಳು. ಇದೇನು ವಿಚಿತ್ರ ಅಂದುಕೊಳ್ಳುತ್ತ ಸಿಗರೇಟ್ ಪ್ಯಾಕೆಟ್ ಮುಂದೆ ಹಿಡಿದ. ಎಲ್ಲರ ಬಾಯಲ್ಲಿ ಸಿಗರೇಟ್ ಸೇರಿದ ಕೂಡಲೇ ಎಲ್ಲರ ತಲೆಗಳೂ ಹತ್ತಿ ಉರಿಯತೊಡಗಿದವು. ಇಡೀ ತಲೆಯಲ್ಲಿ ಬರೀ ಬುರುಡೆ ಮಾತ್ರ. ಅದರ ಮಧ್ಯ ಸಿಗರೇಟ್! ಆ ಅಗ್ನಿ ಜ್ವಾಲೆಯಲ್ಲಿಯೂ ಸಿಗರೇಟ್ ಉರಿಯುತ್ತಿಲ್ಲ! ಆ ಅಗ್ನಿ ಜ್ವಾಲೆಯ ಶಾಖಕ್ಕೆ ಇಡೀ ವಾಹನ ಬಿಸಿಯಾಗತೊಡಗಿತು. ರವಿ ಬಾಗಿಲ ಕಡೆ ನುಗ್ಗಿದ. ಆ ತೆರೆದ ಬಾಗಿಲಿನಿಂದ ಹೊರ ಹಾರೋಣ ಎಂಬ ಮನಸ್ಸಿನಿಂದ ಆ ಮುದುಕನನ್ನು ತಳ್ಳಿ ಬಾಗಿಲಿಂದ ಹಾರಲು ಪ್ರಯತ್ನಿಸಿದ. ಹೊರಗಿದ್ದ ಆ ವ್ಯಕ್ತಿ ಅವನನ್ನು ಒಳ ನೂಕಿದ. ಆ ವ್ಯಕ್ತಿಯ ಇಡೀ ದೇಹವನ್ನು ಬೆಂಕಿಯ ಕೆನ್ನಾಲಿಗೆ ಆವರಿಸಿಕೊಂಡಿತ್ತು. ಸಾವರಿಸಿಕೊಂಡು ಎದ್ದ ಮುದುಕ ಕೂಡ ರವಿಯನ್ನು ಒಳಗೆಳೆದುಕೊಂಡ. ಒಳಗಿದ್ದ ಜನರೆಲ್ಲಾ ಅಗ್ನಿಜ್ವಾಲೆಗಳೊಂದಿಗೆ ಅವನೆಡೆಗೆ ಬರತೊಡಗಿದರು. ಒಂದೊಂದು ಹೆಜ್ಜೆ... ಪುಟ್ಟ ಪುಟ್ಟ ಹೆಜ್ಜೆ... ಒಂದೊಂದು ಹೆಜ್ಜೆಗೂ ಅವನ ದೇಹದ ಕಾವು ಏರತೊಡಗಿತು. ಸಹಿಸಲಾರದ ಶಾಖ ಅವನ ಮೈ ಆವರಿಸತೊಡಗಿತು. ಎಲ್ಲರೂ ಒಟ್ಟಾಗಿ 'ಸಿಗರೇಟ್ ಪ್ಲೀಸ್...' ಎಂದು ಮತ್ತೆ ಮತ್ತೆ ಅವನ ಹತ್ತಿರ ಬರತೊಡಗಿದರು. ಅವರ ಧ್ವನಿಯ ತರಂಗಗಳು ತಾರಕ್ಕೇರಿ ಕಿವಿ ಹರಿದುಹೋಗುವಂತೆ ಭಾಸವಾಯಿತು. ಅದೇ ಸಮಯದಲ್ಲಿ ಆ ವಧುವಿನ ದಿರಿಸಿನವಳು ಒಮ್ಮೆಲೇ ಬಂದು ರವಿಯನ್ನು ತಬ್ಬಿಕೊಂಡಳು. "ಅಯ್ಯಯ್ಯೋ..." ಎಂದು ಕೂಗಿದ ರವಿ!

★★★

"ಇದೇ ಜಾಗದಲ್ಲಿಯಾ ಆ ಬೈಕ್ ಸಿಕ್ಕಿದ್ದು?" ಇನ್‌ಸ್ಪೆಕ್ಟರ್ ಗಣಪತಿ ಊರಿನವರನ್ನು ಪ್ರಶ್ನಿಸಿದ.

"ಹೌದು ಸರ್, ಹದಿನೈದು ದಿನದ ಹಿಂದೆ ಸಿಕ್ಕಿತ್ತು... ಹುಣಸೇನಹಳ್ಳಿಯ ರವಿ ಅನ್ನೋರದ್ದು. ನಾಲ್ಕು ವರ್ಷದಿಂದ ಊರಿಗೆ ಬಂದಿರಲಿಲ್ಲ... ಅವತ್ತು ರಾತ್ರಿ ಬೈಕಲ್ಲಿ ಮನೆಗೆ ಹೋಗ್ತೀನಿ ಅಂತ ಹೇಳಿ ಹೊರಟಿದ್ದನಂತೆ. ಮನೆ ಸೇರಿಲ್ಲ... ಆದರೆ ಬೈಕ್ ಮಾತ್ರ ಇಲ್ಲಿ ಸಿಕ್ಕಿದೆ..."

"ಏನು ಕಿಡ್ನ್ಯಾಪ್ ಕೇಸ್ ಅಂತಾ ರಿಪೋರ್ಟ್ ಆಗಿದೆಯಾ?" ಕಾನ್‌ಸ್ಟೆಬಲ್‌ಗೆ ಕೇಳಿದ. ಗಣಪತಿ ಆ ಇಲಾಖೆಗೆ ಹೊಸದಾಗಿ ಬಂದಿದ್ದ. ಈ ಕೇಸ್ ಬಗ್ಗೆ ಆಸಕ್ತಿ ಬಂದು ಘಟನಾ ಸ್ಥಳಕ್ಕೆ ಬಂದಿದ್ದ.

"ಸರ್, ಅಂದು ಅಮಾವಾಸ್ಯೆ ಬೇರೆ... ಇಲ್ಲೊಂದು ದೆವ್ವಗಳು ತುಂಬಿರುವ ವಾಹನ ಓಡಾಡುತ್ತೆ ಅಂತ ಹೇಳ್ತಾರೆ. ಅದ್ಯಾರೋ ಉತ್ತರ ಭಾರತದ ಕಡೆಯವರಂತೆ. ತನ್ನ ವಿಧವೆ ಮಗಳಿಗೆ ಮತ್ತೊಂದು ಮದುವೆ ಮಾಡಿ ಅಳಿಯನ ಸಮೇತ ಹೋಗುವಾಗ, ಅವನು ಹಣ ಒಡವೆಯ ಆಸೆಗೆ ಸಿಗರೇಟ್ ಸೇದುವ ನೆಪದಲ್ಲಿ ಕೆಳಗಿಳಿದು ಇಡೀ ವಾಹನವನ್ನೇ ಸುಟ್ಟು ಹಾಕಿದ್ದನಂತೆ. ಆಗಲಿಂದ ಅಮಾವಾಸ್ಯೆ ರಾತ್ರಿಯಲ್ಲಿ ಯಾರಾದರೂ ಒಂಟಿಯಾಗಿ ಸಿಕ್ಕರೆ ಅವರನ್ನು ಕರೆದೊಯ್ಯುವ ನೆವ ಮಾಡಿ ಹತ್ತಿಸಿಕೊಂಡು ಕೊಲ್ಲುತ್ತಾರಂತೆ" ಎಂದ ಕಾನ್‌ಸ್ಟೆಬಲ್.

"ಏನು ಮಾತಾಡ್ತಾ ಇದ್ದೀರಾ ನೀವು? ನಾವು ಪೊಲೀಸರು ಇದೆಲ್ಲ ನಂಬಬಾರದು. ಆ ರವಿಯ ಶವ ಎಲ್ಲಿ ಹಾಗಾದರೆ? ಈ ಕಟ್ಟು ಕತೆಯ ನೆವ ಮಾಡಿಕೊಂಡು ಎಲ್ಲಿಯೋ ಹೋಗಿರುತ್ತಾನೆ. ಇಲ್ಲಾ ಯಾರೋ ಸಾಯಿಸಿ ದೆವ್ವ ಸಾಯಿಸಿತು ಅಂತ ಹೇಳುತ್ತಾರೆ ಅಷ್ಟೇ.''